ದಿನಾಂಕಃ **21.03.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಸಹಿ ನನ್ನದೇ ಇರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆ : ವಾದಿಯ ಪರ ವಕೀಲರಿಂದಃ

ನಿಪಿ1 ರಲ್ಲಿ ನನ್ನ ಸಹಿಯನ್ನು ಈಗಾಗಲೇ ನಿಪಿ**1(ಸಿ)** ಎಂದು ಗುರುತಿಸಲಾಗಿದೆ.

ಪಾಟೀ ಸವಾಲು : ಸಮಯ ಕೋರಿದ್ದರಿಂದ ಮುಂದೂಡಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.

ದಿನಾಂಕಃ **21.03.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಸಹಿ ನನ್ನದೇ ಇರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆ : ವಾದಿಯ ಪರ ವಕೀಲರಿಂದಃ

ನಿಪಿ1 ರಲ್ಲಿ ನನ್ನ ಸಹಿಯನ್ನು ಈಗಾಗಲೇ ನಿಪಿ**1(ಇ)** ಎಂದು ಗುರುತಿಸಲಾಗಿದೆ.

ಪಾಟೀ ಸವಾಲು : ಸಮಯ ಕೋರಿದ್ದರಿಂದ ಮುಂದೂಡಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.

ದಿನಾಂಕಃ **21.03.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು **: 2** ನೇ ಪ್ರತಿವಾದಿಯ ಪರ ವಕೀಲರಿಂದಃ

05. ನನ್ನ ಪ್ರಕಾರ ನಮ್ಮ ಸೋಗಿ ಗ್ರಾಮವು ಹರಪ್ಪನಹಳ್ಳಿಯಿಂದ ಸುಮಾರು 15 ಕಿ.ಮೀ. ದೂರವಿರುತ್ತದೆ. ಹಡಗಲಿಯಿಂದ ಸೋಗಿ ಗ್ರಾಮ 5-6 ಕಿ.ಮೀ. ದೂರವಿರಬಹುದು ಎಂದರೆ 10-12 ಕಿ.ಮೀ. ದೂರವಿರಬಹುದು. ಸೋಗಿ ಗ್ರಾಮದಲ್ಲಿ 1 ಎಕರೆ ಜಮೀನಿಗೆ ರೂ. 10 ಲಕ್ಷ ಬೆಲೆ ಇರಬಹುದೇ? ಎಂದರೆ ನನಗೆ ಗೊತ್ತಾಗುವುದಿಲ್ಲ. ನನಗೆ ಅಂದಾಜಿನ ಮೇಲೆ ಕೂಡ ಎಕರೆಗೆ ಎಷ್ಟು ಲಕ್ಷ ಬೆಲೆ ಇರಬಹುದು ಎಂದು ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಪಹಣಿಗಳನ್ನು ನೋಡಿದ್ದೀನಾ? ಎಂದರೆ ನೋಡಿರುತ್ತೇನೆ ಆದರೆ ನನಗೆ ಗೊತ್ತಾಗುವುದಿಲ್ಲ. ಯಾವ ಇಸವಿಯ ಪಹಣಿ ನೋಡಿದ್ದೇನೆಂದು ಗೊತ್ತಿಲ್ಲ. ಕಳೆದ ದಿನಾಂಕದಂದು ನನ್ನನ್ನು ಪಾಟೀಸವಾಲು ಮಾಡುವಾಗ ನನ್ನ 3 ಜನ ಗಂಡುಮಕ್ಕಳು ಕೋರ್ಟಿಗೆ ಬಂದಿದ್ದರು ಎಂದರೆ ವಿಶ್ವನಾಥ ಮತ್ತು ಹೊನ್ನೇಶ ಬಂದು ಕೋರ್ಟ್ ಹೊರಗಡೆ ಇದ್ದರು, ರೆಡ್ಡೆಪ್ಪ ಬಂದಿರಲಿಲ್ಲ. ಈ ದಿನ ನನ್ನ ಮಗ ಹೊನ್ನೇಶ ಮಾತ್ರ ಕೋರ್ಟಿಗೆ ನನ್ನ ಜೊತೆ ಬಂದಿದ್ದಾನೆ. ಕ್ರಯದ ಕರಾರು ಪತ್ರ ಖೊಟ್ಟಿಪತ್ರವಾಗಿದ್ದು ಅದನ್ನು ನಾನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ಸಾಕ್ಷಿಗಳು, ಪತ್ರ ಬರಹಗಾರರು ಮತ್ತು ನನ್ನ 3 ಜನ ಗಂಡು ಮಕ್ಕಳೊಂದಿಗೆ ಶಾಮೀಲಾಗಿ ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಕಾಳಮ್ಮ ನಿಪಿ1 ರ ಮೇಲೆ ಎಲ್ಲಿಯೂ ಸಹಿ ಮಾಡಿಲ್ಲ ಎಂದರೆ ಮಾಡಿದ್ದಾಳೆ. ನಿಪಿ1 ರ ಮೇಲಿರುವ ಪ್ರತಿವಾದಿಯ ಸಹಿಗಳನ್ನು ನಾನು, ನನ್ನ ಮಕ್ಕಳು ಮತ್ತು ಪತ್ರದ ಸಾಕ್ಷಿದಾರರು ಸೇರಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ1 ನೋಂದಣಿಯಾಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2016 ನೇ ಇಸವಿಯಲ್ಲಿ ನಾನು ಕ್ರಯದ ಮುಂಗಡ ಕೊಡಲಿಕ್ಕೆ ಬ್ಯಾಂಕಿನಿಂದ ಯಾವುದೇ ಹಣವನ್ನು ಬಿಡಿಸಿಕೊಂಡಿಲ್ಲ ಎಂದರೆ ನಾನು ಹಣವನ್ನು ಬ್ಯಾಂಕಿನಲ್ಲಿ ಇಟ್ಟಿರಲಿಲ್ಲ, ಕಷ್ಟ ಪಟ್ಟು ದುಡಿದಿದ್ದ ಹಣವನ್ನು ಮನೆಯಲ್ಲಿ ಇಟ್ಟಿದ್ದೆ. ನನ್ನ ಬಳಿ ರೂ. 5 ಲಕ್ಷ ಹಣವಿರಲಿಲ್ಲ ಎಂದರೆ ಸರಿಯಲ್ಲ.

06. ದಾವಾ ಸ್ವತ್ತಿನ ಸರ್ವೇ ನಂ. 185/ಸಿ ಇರುತ್ತದೆ. ಸ. ನಂ. 185 ರಲ್ಲಿ ಒಟ್ಟು ಎಷ್ಟು ಜಮೀನು ಇದೆ? ಎಂದರೆ ಒಟ್ಟು 33 ಎಕರೆ 66 ಸೆಂಟ್ಸ್ ಇರುತ್ತದೆ. ಪೂರಾ 33 ಎಕರೆಗೆ ಚೆಕ್ಕುಬಂದಿ ಹೇಳಲು ಆಗುತ್ತದೆಯೇ? ಎಂದರೆ ನಾನು ದಡ್ಡಳಾದ ಕಾರಣ ಹೇಳಲು ಆಗುವುದಿಲ್ಲ. ನಾನು ಕರಾರು ಮಾಡಿಕೊಂಡ ಸ್ವತ್ತು 33 ಎಕರೆಗೆ ಪೂರ್ವ ದಿಕ್ಕಿನಲ್ಲಿ ಇರುತ್ತದೆ. ನಾನು ದಿನಾಂಕ 21.05.2016 ರಂದು ಹಳೆಯ 50 ರೂಪಾಯಿ ನೋಟುಗಳಲ್ಲಿ ರೂ. 5 ಲಕ್ಷಗಳನ್ನು ಕೊಟ್ಟಿದ್ದೆ. ಅದೇ ದಿನ ಕರಾರನ್ನು ಬರೆಯಿಸಿಕೊಂಡಿದ್ದೆ.

***(ಸಮಯ ಮಧ್ಯಾಹ್ನ 2.00 ಗಂಟೆಯಾಗಿದ್ದರಿಂದ*** ಮುಂದುವರೆದ ***ಪಾಟೀಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಿತು).***

ಮಧ್ಯಾಹ್ನ **2.45** ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ **2** ನೇ ಪ್ರತಿವಾದಿಯ ಪರ ವಕೀಲರಿಂದಃ

07. ನಾನು ರೂ. 50ರ ನೋಟುಗಳಲ್ಲಿ ರೂ. 5 ಲಕ್ಷ ಮೊತ್ತವನ್ನು 1 ನೇ ಪ್ರತಿವಾದಿಗೆ ಕೊಡದೇ ಇದ್ದರೂ ಕೊಟ್ಟಿದ್ದೇನೆಂದು ನಿಪಿ1 ರಲ್ಲಿ ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಬ್ಯಾಂಕ್, ಸೊಸೈಟಿ ಅಥವಾ ಖಾಸಗಿಯವರಿಂದ ಸದರಿ ಮೊತ್ತವನ್ನು ಪಡೆದಿರಲಿಲ್ಲ ಎಂದರೆ ಸರಿ. ನಾನು ಎಷ್ಟು ನೋಟಿನ ಕಟ್ಟುಗಳಲ್ಲಿ ಆ ಹಣವನ್ನು ಕೊಟ್ಟಿದ್ದೇನೆ ಎಂದರೆ ನಾನು ದಡ್ಡಳಾಗಿರುವ ಕಾರಣ ನನ್ನ ಮಗ ವಿಶ್ವನಾಥನ ಮೂಲಕ ಆ ಹಣವನ್ನು ಕೊಡಿಸಿದ್ದೇನೆ. ನಾನು ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಮಗನ ಮೂಲಕ ಆ ಹಣವನ್ನು ಕೊಡಿಸಿದ್ದೇನೆಂದು ಹೇಳಿಲ್ಲವೆಂದರೆ ಹೌದು, ಆದರೆ ಈಗ ಹೇಳುತ್ತಿದ್ದೇನೆ. ನನ್ನ ಮಗನ ಮೂಲಕ ಕೂಡಾ ಯಾವುದೇ ಹಣವನ್ನು ಕೊಡಿಸದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೂರಾ 8 ಎಕರೆಗೆ ಕರಾರು ಮಾಡಿಸಿಕೊಂಡಿರುವ ಕಾರಣ ಅದರ ಕ್ರಯ ಪತ್ರದ ನೋಂದಣಿಗೆ 11 ಇ ಸ್ಕೆಚ್ ನ ಅಗತ್ಯವಿರುವುದಿಲ್ಲ ಎಂದರೆ ಅದರ ಬಗ್ಗೆ ನನ್ನ ಮಗ ವಿಶ್ವನಾಥನಿಗೆ ಮಾಹಿತಿ ಇದೆ. ನನಗೆ ದಾವಾ ಸ್ವತ್ತಿನ ವ್ಯವಹಾರದ ಬಗ್ಗೆ ಏನೂ ಗೊತ್ತಿಲ್ಲ ಎಲ್ಲವೂ ನನ್ನ ಮಗನಿಗೇ ಗೊತ್ತಿದೆ ಎಂದರೆ ಕೂಡಿಟ್ಟ ಹಣವನ್ನು ನನ್ನ ಮಗನ ಮೂಲಕ ಕೊಡಿಸಿದ್ದೆ, ಎಲ್ಲಾ ವ್ಯವಹಾರವನ್ನೂ ನನ್ನ ಮಗನಿಗೇ ಒಪ್ಪಿಸಿದ್ದೇನೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

08. ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಕ್ರಯಕ್ಕೆ ಕೊಟ್ಟ ಬಗ್ಗೆ ನನಗೆ ಯಾವಾಗ ಗೊತ್ತಾಯಿತು? ಎಂದರೆ 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮೊಮ್ಮಗನಾಗಿದ್ದು, ಆತನಿಗೆ ಬರೆದುಕೊಟ್ಟ 15-20 ದಿನಗಳ ನಂತರ ನನಗೆ ಗೊತ್ತಾಯಿತು. ಗೊತ್ತಾದ ನಂತರ ನಾನು ಇಬ್ಬರೂ ಪ್ರತಿವಾದಿಗಳಿಗೆ ನೋಟೀಸ್ ಕಳುಹಿಸಿದ್ದೆ. ಗೊತ್ತಾದ ವಾರದಲ್ಲಿ ನೋಟೀಸ್ ಕಳುಹಿಸಿದ್ದೆ. ಯಾವ ದಿನಾಂಕದಂದು ಕಳುಹಿಸಿದ್ದೆ ಎಂದು ನನಗೆ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಯನ್ನು ಯಾವಾಗ ಕ್ರಯ ಪತ್ರ ಬರೆದುಕೊಡುವಂತೆ ಕೇಳಿದ್ದೆ ಎಂದರೆ ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ, ನನ್ನ ಮಗನಿಗೆ ಗೊತ್ತಿರುತ್ತದೆ. ನೋಟೀಸ್ ನೀಡಲು ಮಾಹಿತಿಯನ್ನು ನನ್ನ ಮಗನೇ ಕೊಟ್ಟಿದ್ದ. 2 ನೇ ಪ್ರತಿವಾದಿಗೆ ಕ್ರಯವಾದ 5-6 ವರ್ಷಗಳ ನಂತರ ದಾವೆ ಹಾಕಿದ್ದೇನೆ ಎಂದರೆ ನನ್ನ ಮಗನಿಗೆ ಗೊತ್ತು. 2 ನೇ ಪ್ರತಿವಾದಿಗೆ ಖಾತೆ ಬದಲಾವಣೆ ಮಾಡುವಾಗ ನಾನು ಯಾವುದೇ ತಕರಾರು ಮಾಡಿಲ್ಲ ಎಂದರೆ ನನಗೆ ಗೊತ್ತಾಗದಂತೆ ಮಾಡಿಕೊಂಡಿದ್ದಾರೆ. ನನ್ನ ಮಗ ಎಚ್.ಡಿ. ಹೊನ್ನೇಶ ಸೋಗಿ ಗ್ರಾಮ ಲೆಕ್ಕಾಧಿಕಾರಿಯ ಬಳಿ ಓಲೇಕಾರನಾಗಿ ಅವರ ಬಳಿಯೇ ಇರುತ್ತಾನೆ ಎಂದರೆ ಸರಿ. ಗ್ರಾಮದಲ್ಲಿ ಯಾವುದೇ ಖಾತೆ ಬದಲಾವಣೆ ಆಗುವಾಗ ನನ್ನ ಮಗನೇ ಪಕ್ಷಕಾರರಿಗೆ ಆ ವಿಚಾರವನ್ನು ತಿಳಿಸಿ

ಕರೆತರುತ್ತಾನೆ ಎಂದರೆ ಗ್ರಾಮ ಲೆಕ್ಕಾಧಿಕಾರಿ ಆದೇಶ ಮಾಡಿದಂತೆ ಕೆಲಸ ಮಾಡುತ್ತಾನೆ. 2017 ರಲ್ಲಿ 2 ನೇ ಪ್ರತಿವಾದಿಗೆ ಕ್ರಯವಾದ ನಂತರ ನನ್ನ ಮಗ ಹೊನ್ನೇಶನೇ 2 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿಸಿದ್ದಾನೆ ಎಂದರೆ ಸರಿಯಲ್ಲ. 2017 ರಲ್ಲಿ 2 ನೇ ಪ್ರತಿವಾದಿಗೆ ಕ್ರಯ ಪತ್ರವಾದ ಬಗ್ಗೆ ನನ್ನ ಮಗ ಹೊನ್ನೇಶ ನನಗೆ ತಿಳಿಸಲಿಲ್ಲವೇ? ಎಂದರೆ ನನಗೇನೂ ಗೊತ್ತಿಲ್ಲ. ಕ್ರಯವಾದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ನಾನು ತಕರಾರು ಮಾಡಿಲ್ಲ ಎಂದರೆ ಸಾಕ್ಷಿಯು ಈಗ ದಾವೆ ಹಾಕಿದ್ದೀನಲ್ಲಾ ಎಂದು ಮರು ಪ್ರಶ್ನೆ ಮಾಡುತ್ತಾರೆ. 2 ನೇ ಪ್ರತಿವಾದಿ ಖರೀದಿ ಮಾಡಿ, ಖಾತೆ ಬದಲಾವಣೆ ಮಾಡಿಸಿಕೊಂಡು ಆತನೇ ಸ್ವಾಧೀನ ಹೊಂದಿದ್ದಾನೆ ಎಂದರೆ ಇಲ್ಲ, ನಾವೇ ಸ್ವಾಧೀನ ಹೊಂದಿ ಉಳುಮೆ ಮಾಡುತ್ತಿದ್ದೇವೆ. 2 ನೇ ಪ್ರತಿವಾದಿಯೇ ಕಬ್ಜೆ ವಹಿವಾಟು ಮಾಡಿಕೊಂಡು ಸಾಲ ಕೂಡಾ ಪಡೆದಿದ್ದಾನೆ ಎಂದರೆ ದಾಖಲೆ ಆತನ ಹೆಸರಿನಲ್ಲಿ ಇರುವುದರಿಂದ ಸಾಲ ಪಡೆದಿರಬಹುದು ಆದರೆ ಸಾಗುವಳಿ ನಾವೇ ಮಾಡುತ್ತಿದ್ದೇವೆ. ದಾವಾ ಸ್ವತ್ತಿನಲ್ಲಿ ನಾನು ಯಾವತ್ತೂ ಕಬ್ಜೆ ವಹಿವಾಟು ಹೊಂದಿ ಉಳುಮೆ ಮಾಡಿಲ್ಲ ಎಂದರೆ ನಾನೇ ಮಾಡಿದ್ದೇನೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸಾಗುವಳಿ ಮಾಡುವಾಗ ನನ್ನ ಮಗ ಹೊನ್ನೇಶ ಸ್ವಾಧೀನಕ್ಕೆ ಅಡ್ಡಿಪಡಿಸಿದ್ದ ಎಂದರೆ ನಮ್ಮ ಸ್ವಾಧೀನಕ್ಕೆ 2 ನೇ ಪ್ರತಿವಾದಿಯೇ ಅಡ್ಡಿಪಡಿಸಿದ್ದ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ವಿರುದ್ಧ 2 ನೇ ಪ್ರತಿವಾದಿಯು ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ನಂ. 24/2018 ರಂತೆ ದಾವೆ ಸಲ್ಲಿಸಿ ಮಧ್ಯಂತರ ತಡೆಯಾಜ್ಞೆ ಪಡೆದಿದ್ದ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಆ ದಾವೆಯಲ್ಲಿ 01.10.2022 ರಂದು 2 ನೇ ಪ್ರತಿವಾದಿಯ ಪರವಾಗಿ ಆದೇಶವಾಗಿತ್ತು ಎಂದರೆ ಸರಿಯಲ್ಲ. ನನ್ನ ಮಗ ಮತ್ತು ಆತನಿಗೆ ಸಂಬಂಧಪಟ್ಟವರು 2 ನೇ ಪ್ರತಿವಾದಿಯ ಸ್ವಾಧೀನಕ್ಕೆ ಅಡ್ಡಿ ಮಾಡದಂತೆ ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ಆ ದಾವೆ 4 ವರ್ಷ 8 ತಿಂಗಳು 22 ದಿನ ವಿಚಾರಣೆಯಾಗಿದೆ ಎಂದರೆ ಸರಿಯಲ್ಲ. ನಾನು, ನನ್ನ ಮಕ್ಕಳು ಮತ್ತು ನಿಪಿ1 ರ ಸಾಕ್ಷಿದಾರರು ಶಾಮೀಲಾಗಿ ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ 1 ನೇ ಪ್ರತಿವಾದಿ ಆ ಪತ್ರಕ್ಕೆ ಮಾಹಿತಿ ಕೊಟ್ಟಿಲ್ಲ ಮತ್ತು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆ ಪತ್ರದಲ್ಲಿ ನಮೂದಾಗಿರುವ ಮೊತ್ತವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕಾನೂನು ಬಾಹಿರ ಪತ್ರವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರ, ಸಾಕ್ಷಿ ಪ್ರಮಾಣ ಪತ್ರ ಮತ್ತು ನನ್ನ ದಾಖಲೆಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

***(1** ನೇ ಪ್ರತಿವಾದಿ ಪರ ವಕೀಲರು ಇದೇ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿದ್ದು ಅನುಮತಿ ನೀಡಲಾಗಿದೆ***)***.**

ಮರು ವಿಚಾರಣೆ: ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).
ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**